ಹಿರಿಯ ವ್ಯವಹಾರ ನ್ಯಾಯಾಧೀಶರವರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ,
ಸಕಲೇಶಪುರ

ಃಸಿ ಸಿ ಸಂಖ್ಯೆಃ 308/2025:

ಫಿರ್ಯಾದುದಾರರು ಃ ನಗರ ಆರಕ್ಷಕ ಠಾಣೆ , ಸಕಲೇಶಪುರ

ವಿರುದ್ಧ

ಆರೋಪಿ ಃ ಅಸಿಫ್ ಪಾಷ ಮತ್ತು ಇತರರು

ಃದೋಷಾರೋಪಣೆಃ

ಶ್ರೀ ಜಯಪ್ರಕಾಶ್.ವಿ, ಬಿ.ಎ. ಎಲ್.ಎಲ್.ಬಿ , ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಸಕಲೇಶಪುರ ಆದ ನಾನು ಆರೋಪಿತರಾದಃ

ಆ.1 ಆಸಿಫ್ ಪಾಷ ಬಿನ್ ಜಬೀರ್ ಪಾಷ, ವಯ್ಯಸ್ಸು 26 ವರ್ಷ, ಮುಸ್ಲಿಂರು, ವ್ಯಾಪಾರಸ್ಥ, ವಾಸ ಎಂ.ಎಸ್ ಹಾಲ್, ಕುಶಾಲನಗರ ಬಡಾವಣೆ, ಸಕಲೇಶಪುರ ಪಟ್ಟಣ

ಆ.2 ಹರ್ಷ ಬಿನ್ ರಾಜು, ವಯ್ಯಸ್ಸು 18 ವರ್ಷ, ಕೂಲಿ ಕೆಲಸ, ವಾಸ 4ನೇ ಅಡ್ಡ ರಸ್ತೆ , ಪ್ರೇಮ ನಗರ ಬಡಾವಣೆ, ಸಕಲೇಶಪುರ ಪಟ್ಟಣ

ಆ.3 ಮೊಹಮ್ಮದ್ ಸುಹೀಬ್ ಬಿನ್ ಮೊಹಮದ್ ರಫೀಖ್, ವಯ್ಯಸ್ಸು 22 ವರ್ಷ, ಮುಸ್ಲಿಂರು,

ವಾಸ ಹೌಸಿಂಗ್ ಬೊರ್ಡ್ ,ಕುಶಾಲನಗರ
ಬಡಾವಣೆ, ಸಕಲೇಶಪುರ ಪಟ್ಟಣ

ಆ.4 ಬಾಷ ಬಿನ್ ಲೇಟ್ ಅಬ್ದುಲ್ ಜಬ್ಬಾರ್,
ವಯ್ಯಸ್ಸು 52 ವರ್ಷ, ವಾಸ ಪ್ರೇಮನಗರ
ಬಡಾವಣೆ, ಸಕಲೇಶಪುರ ಪಟ್ಟಣ

ನಿಮಗೆ ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆಃ

1. ದಿನಾಂಕಃ 16/04/2025 ರಂದು ಬೆಳಿಗ್ಗೆ 05-30 ಗಂಟೆ ಸಮಯದಲ್ಲಿ ಚಾ ಸಾ 1 ಜಗದೀಶ ಎಂ ಇವರಿಗೆ ಬಾತ್ಮೀದಾರರು ನೀಡಿದ ಮಾಹಿತಿ ಮೇರೆಗೆ ಚಾ ಸಾ 3 ಯೋಗೇಶ , ಚಾ ಸಾ 4 ರಾಕೇಶ , ಚಾ ಸಾ 5 ಕೌಶಿಕ್ , ಚಾ ಸಾ 6 ಬಷೀರ್ ಹಾಗೂ ಚಾ ಸಾ 7 ಅಣ್ಣಪ್ಪ ಇವರುಗಳನ್ನು ಜೊತೆಗೆ ಕರೆದುಕೊಂಡು ಸಕಲೇಶಪುರ ತಾಲ್ಲೂಕು , ಕಸಬಾ ಹೋಬಳಿ, ಮಳಲಿ ಗ್ರಾಮದ ಬಳಿ ಹರಿಯುವ ಹೇಮಾವತಿ ನದಿಗೆ ಹೊಸದಾಗಿ ನಿರ್ಮಿಸಿರುವ ಹೊಸ ಸೇತುವೆಯ ಕೆಳಭಾಗಕ್ಕೆ ಹೋದಾಗ ಮೇಲ್ಕಂಡ ಎಲ್ಲಾ ಆರೋಪಿಗಳಾದ ನೀವುಗಳು ಸೇರಿಕೊಂಡು ಹೇಮಾವತಿ ನದಿ ಪಾತ್ರದಿಂದ ಸಿಮೆಂಟ್ ಚೀಲಗಳಲ್ಲಿ ಮರಳನ್ನು ಕಳ್ಳತನದಿಂದ ತುಂಬಿ 1) ಕೆಎ 19 ಈ ಎಸ್ 7692 ಹಾಗೂ 2) ಕೆಎ 20 ಡಬ್ಲ್ಯೂ 5004 ದ್ವಿಚಕ್ರ ವಾಹನಗಳಲ್ಲಿ ಸರ್ಕಾರದ ಯಾವುದೇ ಪರ್ಮಿಟ್ ಹೊಂದದೇ, ಹೊಗೆ ತಪಾಸಣಾ ಪತ್ರವನ್ನು ಹೊಂದದೇ, ಚಾಲನಾ ಪರವಾನಗಿಯನ್ನು ಹೊಂದದೇ ಹಾಗೂ ಯಾವುದೇ ವಿಮೆಯನ್ನು ಹೊಂದದೇ 0.172 ಘ.ಮಿ

ಪ್ರಮಾಣದಷ್ಟು( 318.00 ರೂಪಾಯಿ ಮೌಲ್ಯ) ಮರಳನ್ನು ಖಾಲಿ ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿ ಅವುಗಳನ್ನು ನಿಮ್ಮ ಬಾಬ್ತು ಮೇಲ್ಕಂಡ ದ್ವಿಚಕ್ರ ವಾಹನದ ಮುಂಭಾಗದಲ್ಲಿ ಇಟ್ಟುಕೊಂಡು ಅಕ್ರಮವಾಗಿ ಸಾಗಾಟ ಮಾಡುತ್ತಿದ್ದು, ಆ ನಿಮಿತ್ತದಿಂದ ಮೇಲ್ಕಂಡ ಆರೋಪಿತರಾದ ನೀವುಗಳು ಭಾರತೀಯ ನ್ಯಾಯ ಸಂಹಿತೆ ಕಲಂ.303(2), 2023 ಜೊತೆಗೆ ಕಲಂ.192(ಎ), 190(2),181, 196 ಭಾರತೀಯ ಮೋಟಾರು ವಾಹನ ಕಾಯ್ದೆ 1988 ಜೊತೆಗೆ ಕಲಂ.115 ಕೇಂದ್ರ ವಾಹನ ನಿಯಮ 1989 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

**ಆರೋಪಿಯ ಉತ್ತರ**

**1. ಮೇಲಿನಂತೆ ಆರೋಪಿಸಿದ ದೋಷಾರೋಪಣೆಗಳನ್ನು ಓದಿ ಹೇಳಿದ್ದು, ನಿಮಗೆ ಅರ್ಥವಾಗಿದೆಯೇ?**

ಉ.

**2. ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯನ್ನು ಬಯಸುತ್ತೀರಾ?**

ಉ.

**ಮೇಲಿನಂತೆ ಆರೋಪಗಳನ್ನು ಆರೋಪಿಯಾದ ನಿಮಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ವಿವರಿಸಿ ನೀವು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಎಂಬುದಾಗಿ ದೃಢೀಕರಿಸಲಾಗಿದೆ.**

ಸಕಲೇಶಪುರ
ದಿನಾಂಕಃ 06-10-2025

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಸಕಲೇಶಪುರ

ಆರೋಪಿಗಳುಃ

ಆ.1

ಆ.2

ಆ.3

ಆ.4